

ಇಲ್ಲಾ, ಉಂಬೋ ಹೊತ್ತಲ್ಲಿ ಯಾರೂ ಇಲ್ಲದಾಗ
ಖೋಲಿಗೆ ನುಸುಳಿ ಚಿಕ್ಕೋರ ಪುಸ್ತಕ ಕದ್ದಿದ್ರೆ
'ಕಳ್ಳ' ಅಂತ ನೂರು ಸಲ ಉಟಾಬೈಟ್ ಮಾಡ್ಸಿ
ಅವ್ನ ಮೊಣಕಾಲ್ಗೆ ಬಿಸಿನೀರು ಎತ್ತಂಗ ಮಾಡಿ
ತಿದ್ದಿ ಬುದ್ಧಿ ಹೇಳಬೋದಿತ್ತು
ಹೆಂಗಿದ್ರು ಛಡಿ ಅವ್ರ ಕೈಯಾಗೇ ಇತ್ತು...

ಒಂದುವ್ಯಾಳೆ, ಅಂಗಳದಾಗ ಸಾಲಾಗಿ ನಿಂತು
ಜನಗಣಮನ ಹಾಡೋವಾಗ
ಜಗತ್ತಿನ ಕಣ್ತಪ್ಪಿಸಿ ಅವ್ರ ಆಪೀಸಿಗೆ ನುಗ್ಗಿ
ರೊಕ್ಕ, ಇಲ್ಲಾ ಮೊಬೈಲ್ ಎಗರಿಸಿದ್ದಿದ್ದರೆ
'ಖದೀಮ' ಅಂತ ಕಿವಿ ಹಿಂಡಿ ಎಳಕಂಬಂದು
ದಂಡೆದುರು ಕುಂಡಿಗೆ ನಾದಿ ಮಂಡಿ ಊರಿಸಬೋದಿತ್ತು
ಹೆಂಗಿದ್ರು ಛಡಿ ಅವ್ರ ಕೈಯಾಗೇ ಇತ್ತು...

ಹೋಗ್ಲಿ, ಕೊತ ಕೊತ ಕುದಿತಿದ್ದ ಬಿಸಿ ಬಾನಕ್ಕ
ಮುಟಿಗಿ ಉಸುಕು ಚೆಲ್ಲಿ ಪರಾರಿ ಆಗಿ
ತಿಂಬೋರ ಬಾಯಿಗೆ ಮಣ್ಣು ತುಂಬಿದ್ದಿದ್ದರೆ
'ಮನೆಹಾಳ' ಅಂತ ಹುಡ್ಕಿ ತಂದು ಬೆರಳು ಹಿಂದೆ ಮಾಡಿ
ಎಲುಬು ಮುರ್‍ಯಂಗ ನಾದಿ ಪಾಠ ಕಲ್ಸಬೋದಿತ್ತು
ಹೆಂಗಿದ್ರು ಛಡಿ ಅವ್ರ ಕೈಯಾಗೇ ಇತ್ತು...

ಹೌದಪ್ಪ, ತನ್ ತಂಗಿ ತೂಕದ ಮಗುನ ಛೇಡಿಸಿ
ತಕ್ಕನಲ್ಲದ್ದು ಬಗೆದು ತಲೆಮರ್ಸಕಂಡು
ಕೇಡಿ ಆಗಿದ್ದರೆ 'ಯಾವನಿಗೆ ಹುಟ್ಟಿದ್ದು' ಅಂತ ಉಗಿದು
ಕಳ್ಳು ಕತ್ತರಿಸಿಕಂಡು ಎತ್ತಿದ ನಮ್ಮನ್ನ ಕರೆಸಿ
ಕಣ್ಣೆದುರೆ ಕಪಾಳಕ್ಕೆ ನಾಕು ಬಿಗಿಬೋದಿತ್ತು
ಹೆಂಗಿದ್ರು ಛಡಿ ಅವ್ರ ಕೈಯಾಗೇ ಇತ್ತು...

